ಓ.ಎಸ್.ನಂ.**137/2016**
ಡಿಡಬ್ಲ್ಯೂ .**1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **20.08.2025**.
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಮುಖ್ಯ ವಿಚಾರಣೆಃ ಪ್ರತಿವಾದಿಗಳ ಪರ ಶ್ರೀ ಎಂ.ಬಿ.ಎಸ್.ವಕೀಲರಿಂದ**

ನಾನು ಪ್ರತಿವಾದಿಗಳ ಜಿ.ಪಿ.ಎ. ಹೋಲ್ಡರ್ ಇರುತ್ತೇನೆ. ನಾನು ಕೊಟ್ಟ ಮಾಹಿತಿಯ ಪ್ರಕಾರ ನನ್ನ ವಕೀಲರು ನನ್ನ ಸಾಕ್ಷ್ಯದ ಹೇಳಿಕೆಯ ಮುಖ್ಯ ವಿಚಾರಣೆಯ ಶಪಥ ಪತ್ರವನ್ನು ತಯಾರಿಸಿರುತ್ತಾರೆ. ಅದರಲ್ಲಿರುವ ಸಂಗತಿಗಳು ಸರಿ ಇವೆ. ಅದನ್ನು ಈಗ ಹಾಜರು ಮಾಡುತ್ತಿದ್ದೇನೆ.

ಜಿ.ಪಿ.ಎ. ಪತ್ರವನ್ನು ನಿ.ಡಿ.**9** ಎಂದು, ವಂಶವೃಕ್ಷವನ್ನು ನಿ.ಡಿ.**10** ಎಂದು, ಆರ್.ಆರ್. ಪ್ರತಿಯನ್ನು ನಿ.ಡಿ.**11** ಎಂದು, ಸರ್ವೆ ನಂ.**33/6** ರ **6** ಪಹಣಿಗಳನ್ನು ನಿ.ಡಿ.**12** ರಿಂದ ನಿ.ಡಿ. **17** ಎಂದು, ಸರ್ವೆ ನಂ.**31** ರ **2** ಪಹಣಿಗಳನ್ನು ನಿ.ಡಿ.**18** ಮತ್ತು ನಿ.ಡಿ.**19** ಎಂದು, ಸರ್ವೆ ನಂ.**47/2** ರ ಪಹಣಿಯನ್ನು ನಿ.ಡಿ.**20** ಎಂದು, ಸರ್ವೆ ನಂ.**33/6** ರ ಎರಡು ಪಹಣಿಗಳನ್ನು ನಿ.ಡಿ.**21** ಮತ್ತು ನಿ.ಡಿ.**22** ಎಂದು, ಸರ್ವೆ ನಂ.**110/3** ರ ಪಹಣಿಯನ್ನು ನಿ.ಡಿ.**23** ಎಂದು, ಎಂ.ಆರ್. ಪ್ರತಿಯನ್ನು ನಿ.ಡಿ.**24** ಎಂದು, ಎರಡು ಇಂಡೆಕ್ಸ್ ಆಫ್ ಲ್ಯಾಂಡ್ಸ್ ಪ್ರತಿಗಳನ್ನು ನಿ.ಡಿ.**25** ಮತ್ತು ನಿ.ಡಿ.**26** ಎಂದು, ಆರ್.ಆರ್. ಪ್ರತಿಯನ್ನು ನಿ.ಡಿ.**27** ಎಂದು, ಆಕಾರ್ ಬಂದ್ ಉತಾರ್ ನ್ನು ನಿ.ಡಿ.**28** ಎಂದು, ಎರಡು ನಕ್ಷೆಗಳನ್ನು ನಿ.ಡಿ.**29** ಮತ್ತು ನಿ.ಡಿ.**30** ಎಂದು, ಎರಡು ಹಿಸ್ಸಾ ಸರ್ವೆ ಪಕ್ಕಾ ಪುಸ್ತಕದ ಪ್ರತಿಗಳನ್ನು ನಿ.ಡಿ.**31** ಮತ್ತು ನಿ.ಡಿ.**32** ಎಂದು, ಹಿಸ್ಸಾ ಟಿಪ್ಪಣಿಯನ್ನು ನಿ.ಡಿ.**33** ಎಂದು, ಎಫ್.ಡಿ.ಪಿ. ನಂ.**1/1986** ರಲ್ಲಿ ಸಲ್ಲಿಸಿದ ಪ್ರಮಾಣ ಪತ್ರವನ್ನು ಮತ್ತು ಅರ್ಜಿಯನ್ನು ನಿ.ಡಿ.**34** ಮತ್ತು ನಿ.ಡಿ.**35** ಎಂದು, ಪ್ರಿಲಿಮಿನರಿ ಡಿಕ್ರಿಯ ದೃಢೀಕೃತ ನಕಲನ್ನು ನಿ.ಡಿ.**36** ಎಂದು, ಅಸಲು ದಾವೆ ಸಂಖ್ಯೆಃ**290/1999** ರ

ತಿದ್ದುಪಡಿ ದಾವಾ ಪತ್ರ, ದಾವಾ ಪತ್ರ ಮತ್ತು ಎರಡು ಲಿಖಿತ ಹೇಳಿಕೆಗಳ ದೃಢೀಕೃತ ನಕಲಗಳನ್ನು ನಿ.ಡಿ.**37** ರಿಂದ ನಿ.ಡಿ.**40** ಎಂದು, ದಿನಾಂಕ:**14.07.1943** ರ ನೋಂದಾಯಿತ ಕ್ರಯಪತ್ರದ ದೃಢೀಕೃತ ನಕಲನ್ನು ನಿ.ಡಿ.**41** ಎಂದು, ಎಫ್.ಡಿ.ಪಿ. ಪ್ರಕರಣದಲ್ಲಿ ತಹಶೀಲ್ದಾರ್ ರವರು ಸ್ಕೆಚ್, ಹೇಳಿಕೆ ಮತ್ತು ನಿವೇದನೆಯನ್ನು ಒಳಗೊಂಡಂತೆ ಸಲ್ಲಿಸಿದ ವರದಿಯನ್ನು ಒಟ್ಟಾಗಿ ನಿ.ಡಿ.**42** ಎಂದು, **9** ಫೋಟೋಗಳನ್ನು ನಿ.ಡಿ.**43** ರಿಂದ ನಿ.ಡಿ.**51** ಎಂದು, ಒಂದು ಸಿ.ಡಿ.ಯನ್ನು ನಿ.ಡಿ.**52** ಎಂದು ಗುರುತಿಸಲಾಯಿತು.

ಮುಖ್ಯ ವಿಚಾರಣೆ ಮುಕ್ತಾಯಗೊಂಡಿದೆ.

**ಪಾಟೀ ಸವಾಲು: ವಾದಿ ಪರ ಶ್ರೀ ಎನ್.ಆರ್.ಆರ್. ವಕೀಲರಿಂದ**

ಈ ಕೇಸಿನಲ್ಲಿ **2** ಮತ್ತು **3**ನೇ ಪ್ರತಿವಾದಿಯರ ಪರವಾಗಿ ಅವರ ಮಕ್ಕಳು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಏನಾದರೂ ತೊಂದರೆ ಇದೆಯಾ ಎಂದರೆ ಸಾಕ್ಷಿಯು ಅವರೆಲ್ಲಾ ನನಗೆ ಸಾಕ್ಷಿ ಹೇಳಲು ಅಧಿಕಾರ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. **1**ನೇ ಪ್ರತಿವಾದಿಗೆ ಕಣ್ಣು ಕಾಣಿಸುವುದಿಲ್ಲ ಹಾಗೂ ಕಿವಿ ಕೇಳಿಸುವುದಿಲ್ಲವೆಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿದ್ದೀರಾ ಎಂದರೆ ಇಲ್ಲ. ನನಗೆ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ವಾದಿಯರು ಈ ದಾವೆಯಲ್ಲಿ ಯಾವ ಪರಿಹಾರ ಕೇಳಿದ್ದಾರೆ ಎಂದರೆ ಸಾಕ್ಷಿಯು ನಮ್ಮ **10** ಗುಂಟೆಯನ್ನು ಸೇರಿಸಿ ವಾದಿಯರು ಈ ದಾವೆ ಹಾಕಿದ್ದಾರೆ ಎಂದು ಹೇಳುತ್ತಾರೆ. ದಾವಾ ಸರ್ವೆ ನಂ.**33/6** ರಲ್ಲಿ ಒಟ್ಟು **24** ಗುಂಟೆ ಇದೆ ಎಂದರೆ ಸರಿ. ಸದರಿ ಆಸ್ತಿಯು ಮೂಲತಃ ಚಿಕ್ಕರಾಮಯ್ಯ ಮತ್ತು ರಾಮಯ್ಯನವರಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಅವರಿಬ್ಬರೂ ಸೇರಿ ದಿನಾಂಕ:**04.10.1978** ರಂದು ಎನ್.ಬಿ. ರಾಜಣ್ಣ ಬಿನ್ ದೊಡ್ಡಭೈರಪ್ಪನವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಂತರ ರಾಮಯ್ಯನವರು ದಿನಾಂಕ: **13.12.1978** ರಂದು ಪುನಃ ರಾಜಣ್ಣನವರ ಕಡೆಯಿಂದ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರಗಳನ್ನು ಇದುವರೆಗೂ

ಎಲ್ಲಿಯಾದರೂ ಪ್ರಶ್ನೆ ಮಾಡಿದ್ದೀರಾ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯು ವಾದಿಯ ತಂದೆಗೆ ದಿನಾಂಕ:**13.12.1978** ರ ಕ್ರಯಪತ್ರದ ಮೂಲಕ ಬಂದಿದೆ ಎಂದರೆ ಸರಿಯಲ್ಲ. ಅಂದಿನಿಂದ ವಾದಿಯರು ದಾವಾ ಆಸ್ತಿಯ ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿಯ ತಂದೆ ಅವಿದ್ಯಾವಂತರಾಗಿದ್ದ ಕಾರಣ ದಾವಾ ಆಸ್ತಿಯ ಖಾತೆಯನ್ನು ಮಾಡಿಸಿಕೊಂಡಿರಲಿಲ್ಲ ಹಾಗೂ ಅದರ ಖಾತೆಯು ಭೈರೇಗೌಡ ಹಾಗೂ ಅವರ ಮಕ್ಕಳ ಹೆಸರಿನಲ್ಲಿಯೇ ಮುಂದುವರೆದುಕೊಂಡು ಬಂದಿತ್ತು ಎಂದರೆ ಸರಿಯಲ್ಲ. ವಾದಿಯರು ಎಂ.ಆರ್.ನಂ.**17/2001–02** ನ್ನು ಪ್ರಶ್ನಿಸಿ ಆರ್.ಎ.ನಂ.**58/2011–12** ರಲ್ಲಿ ಎ.ಸಿ. ರವರ ಮುಂದೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ದಿನಾಂಕ:**11.02.2014** ರಂದು ಸದರಿ ಮೇಲ್ಮನವಿಯನ್ನು ಪುರಸ್ಕರಿಸಿ ವಾದಿಯರ ಪರವಾಗಿ ಖಾತೆ ಮಾಡಲು ಆದೇಶಿಸಿದ್ದಾರೆ ಎಂದರೆ ಸುಳ್ಳು, ಗೊತ್ತಿಲ್ಲ. ಎಂ.ಆರ್.ಹೆಚ್.ನಂ.**25/2013–14** ರಂತೆ ದಾವಾ ಆಸ್ತಿಯ ಖಾತೆಯು ವಾದಿಯರ ಹೆಸರಿಗೆ ವರ್ಗಾವಣೆಯಾಗಿದೆ ಎಂದರೆ ಸಾಕ್ಷಿಯು ಮೋಸದಿಂದ ಮಾಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಈ ಕೇಸ್ ಹಾಕಿದ ನಂತರ ಸದರಿ ಮ್ಯೂಟೇಷನ್ ಆದೇಶವನ್ನು ಪ್ರಶ್ನಿಸಿದ್ದೀರಾ ಎಂದರೆ ಇಲ್ಲ. ತಹಶೀಲ್ದಾರ್ ರವರು ಮತ್ತು ಎ.ಸಿ. ರವರು **1978** ರ ಕ್ರಯಪತ್ರದ ಆಧಾರದ ಮೇಲೆ ಕಾನೂನು ಪ್ರಕಾರವಾಗಿ ವಾದಿಯರ ಹೆಸರಿಗೆ ವರ್ಗಾವಣೆ ಮಾಡಿರುವ ಕಾರಣ ನಾವು ಅದನ್ನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ.

ಅಸಲು ದಾವೆ ಸಂಖ್ಯೆ:**32/1976** ಮತ್ತು ಎಫ್.ಡಿ.ಪಿ.ನಂ.**1/1986** ರಲ್ಲಿ ವಾದಿಯರು ಪಕ್ಷಗಾರರಲ್ಲ ಎಂದರೆ ಸರಿ. ಆದ್ದರಿಂದ ವಾದಿಯರಿಗೆ ಸದರಿ ತೀರ್ಪು ಮತ್ತು ಅದೇಶವು ಅನ್ವಯಿಸುವುದಿಲ್ಲ ಎಂದರೆ ಸರಿ. ನಂತರ ಸರಿಯಲ್ಲ ಎಂದು ಉತ್ತರಿಸುತ್ತಾರೆ. ದಿನಾಂಕ:**21.03.2016** ರಲ್ಲಿ ದಾವಾ ಸ್ವತ್ತು ವಾದಿಯರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಎಫ್.ಡಿ.ಪಿ.ಯಲ್ಲಿ ಆದ ಅದೇಶದ ನಂತರ ನಾವು ಖಾತಾ ಬದಲಾವಣೆಗೆ ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿ. ಆ ಸಮಯದಲ್ಲಿ ದಾವಾ ಆಸ್ತಿಯ ಖಾತೆಯ ವಾದಿಯರ ಹೆಸರಿನಲ್ಲಿ ಇದೆ ಎಂದು ದಿನಾಂಕ:**21.03.2016** ರಂದು ವಾದಿಯರಿಗೆ ತಹಶೀಲ್ದಾರ್ ರವರು ನೋಟೀಸ್ ಕೊಟ್ಟಿದ್ದರು ಎಂದರೆ ಸರಿಯಲ್ಲ.

ಸದರಿ ನೋಟೀಸಿಗೆ ವಾದಿಯರು ತಕರಾರು ಸಲ್ಲಿಸಿದ್ದರು ಎಂದರೆ ಸರಿ. ನಂತರ ವಾದಿಯರು ಅವರ ಆಸ್ತಿಯನ್ನು ಸೇರಿಸಿಕೊಂಡು ಡಿಕ್ರಿ ಮಾಡಿಸಿಕೊಂಡಿದ್ದಾರೆ ಎಂದು ಈ ದಾವೆಯನ್ನು ಹಾಕಿದ್ದಾರೆ ಎಂದರೆ ಸರಿ. **1976** ರಲ್ಲಿ ದಾವಾ ಆಸ್ತಿಯ ಖಾತೆಯು ನಿಮ್ಮ ತಾತನ ಹೆಸರಿನಲ್ಲಿ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ಏನಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಹೌದು. ನಾನು ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ರೆವಿನ್ಯೂ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ರೆವಿನ್ಯೂ ದಾಖಲಾತಿಗಳನ್ನು ಹಾಜರುಪಡಿಸದೇ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಅನಾವಶ್ಯಕವಾಗಿ ವಾದಿಯರಿಗೆ ಸೇರಿದ **10** ಗುಂಟೆಯನ್ನು ಸೇರಿಸಿಕೊಂಡು ಡಿಕ್ರಿ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ.

**ಮುಂದುವರೆದ ವಾಟೀ ಸವಾಲುಃ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.